Online Newspaper Clipping Service

**Dated, Thursday 23rd, March – 2017**

DECCAN HERALD

**Pg.No.02**

# Devaraj Urs Institute convocation tomorrow

KOLAR: The seventh convocation of Devaraj Urs Higher Education and Research Institute will be held at the Silver Jubilee Hall of the college at 11 am on March 24, Devaraj Urs Medical University vice chancellor Dr C V Raghuveer said.

Addressing a press conference here, he said 271 candidates would be awarded degrees at the convocation. Gold medals would be presented to each five students in postgraduate and diploma sutdents. An MBBS student would also be given a gold medal. Dr R Yashaswini, Dr R Nikhila, Dr K Dileep Kumar, Dr T C Supriya, Dr S Chaitra and Dr Navanya have won the gold medals, he added.

Bengaluru-based Sri Jayadeva Institute of Cardiovascular Sciences and Research Institute Dr C N Manjunath would deliver the convocation speech. Chancellor Dr S Kumar would present the degrees to the candidates. President of Devaraj Urs Educational Institution R L Jalappa would be the chief guest on the occasion, he said.

Registrar Dr A V M Kutti, principal Dr Harendra Kumar and examination controller Dr D V L N Prasad were present in the press conference.

DH News Service

DECCAN HERALD



# Amendment Bill for NEET tabled

**BENGALURU: The state government on Wednesday tabled an amendment Bill in the Legislative Assembly to enable holding the National Eligibility cum Entrance Test for admissions to medical and dental courses from the coming academic year.**

Higher Education Minister Basavaraj Rayareddy, who piloted the Bill, told reporters that the Bill — the Karnataka Professional Educational Institutions (Regulation of Admission and Determination of Fee) (Amendment) Bill, 2017 — has proposed to incorporate guidelines framed under NEET. This will enable medical and dental aspirants to write NEET.

This, in other words, means that Karnataka Examinations Authority (KEA) will not conduct a Common Entrance Test (CET) for admissions to medical and dental courses from the 2017-18 academic year.

NEET is a single national eligibility test for admissions to medical and dental collages across India. Seats in government colleges and government quota seats in private colleges will be filled based on NEET scores. The number of postgraduate medical and dental seats under the government quota seats in minority institutions will go up to 25% from 20% if all the provisions of the amendment Bill come into effect, the minister said.

The Bill also empowers the government to conduct centralised counselling based on NEET guidelines and includes private universities in the definition of "professional educational institutions". Besides, it seeks to empower the government to conduct CET through KEA and enter into a consensual agreement with private educational institutions if NEET is not held.

## Engineering courses

Rayareddy said the Centre is planning to introduce NEET for admissions to engineering courses also. But nothing has been finalised yet. If NEET is not held for engineering, the government will conduct CET through KEA as usual, he added. This apart, the government tabled the Karnataka Medical Registration (Amendment) Bill, 2017, seeking to ensure representation of all four revenue divisions of the state in the Karnataka Medical Council and renewal of registration for medical practitioners.

**DH News Service**

# 30% reservation likely for State students in medical, dental seats

## This is in addition to quota in unaided, minority institutions

SPECIAL CORRESPONDENT
BENGALURU

IN THE LEGISLATURE

There might be some good news for medical and dental seat aspirants from the State. All educational institutions might now have to reserve 30% seats for Karnataka students. This will be in addition to government quota seats that are already being given by unaided and minority institutions.

This has been mandated under the Karnataka Professional Educational Institutions (Regulation of Admission and Determination of Fee) Amendment Bill, 2017, tabled in the Assembly on Wednesday.

Medical Education Minister Sharan Prakash Patil told *The Hindu* that all institutions – minority, deemed and unaided institutions – would be mandated to follow the reservation.

Besides that the Bill states that if the Union government or its agency conducts CET, the ranking of the candidates shall be obtained from such a mechanism.

It helps in the filling up of seats, through the CET Committee or Union government and its agencies, in deemed universities also.

The Bill has been introduced in the light of introduction of National Eligibility cum Entrance Test (NEET) for admission to medical and dental courses across the country.

The Bill also provides a provision that if private educational institutions agrees to a consensual agreement with the government, then the conduct of CET shall be in accordance with such an agreement.

**Framing of rules**

It also provides for framing of rules by the State government for conducting centralised counselling by it or by such agency, in such a manner as may be prescribed.

The Bill, according to the Minister for Higher Education Basavaraj Rayaraddi, will help get 5% more seats for minority institutions and more Karnataka students.

# Govt tables amendment bill to scrap ComedK

TIMES NEWS NETWORK

**Bengaluru:** The government introduced a comprehensive amendment for a common entrance examination for professional courses in the state, including engineering, medical and dental undergraduate and postgraduate seats.

The Karnataka Professional Educational Institutions (Regulation of Admission and Determination of Fee) amendment bill 2017, seeks to scrap all other entrance examinations to professional courses, including ComedK and private university exams.

The bill was tabled by higher education minister Basavaraj Rayaraddi. While the amendment will cover all courses, the government will initially introduce the new act for medical and dental courses, in the backdrop of the National Eligibility Cum Entrance Test (NEET) becoming mandatory. Till the time a NEET format is introduced for engineering courses nationwide, the existing seat-sharing matrix will continue.

Rayaraddi said: "We are making prior arrangements for engineering courses as well, as the Centre is seriously considering a common exam even for those courses." In the bill, the government has omitted the words "conducted by association of unaided private professional educational institutions", thus scrapping all other entrance exams for professional courses, including engineering in private colleges.

The government has also mooted a 50% reservation in the general category for Karnataka students in all professional courses.

### ಐದು ವಿದ್ಯಾರ್ಥಿಗಳಿಗೆ ಚಿನ್ನದ ಪದಕ

# ಅರಸು ವೈದ್ಯಕೀಯ ಕಾಲೇಜು ಘಟಿಕೋತ್ಸವ ಮಾ.24ಕ್ಕೆ

ಪ್ರಜಾವಾಣಿ ವಾರ್ತೆ

**ಕೋಲಾರ:** 'ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ಘಟಿಕೋತ್ಸವ ಕಾರ್ಯಕ್ರಮವನ್ನು ಮಾ.24ರಂದು ಬೆಳಿಗ್ಗೆ 11ಕ್ಕೆ ವೈದ್ಯಕೀಯ ಕಾಲೇಜಿನ ರಹಜ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ದೇವರಾಜ ಅರಸು ವೈದ್ಯಕೀಯ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಘಟಿಕೋತ್ಸವದಲ್ಲಿ ಸಂಸ್ಥೆಯ 271 ಮಂದಿ ವೈದ್ಯಕೀಯ ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಹೇಳಿದರು.

ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾ ಕೋರ್ಸ್‌ನ ತಲಾ 5 ವಿದ್ಯಾರ್ಥಿಗಳಿಗೆ ಹಾಗೂ ಎಂಬಿಬಿಎಸ್ ವಿದ್ಯಾರ್ಥಿನಿಗೆ ಚಿನ್ನದ ಪದಕ ನೀಡಲಾಗುತ್ತದೆ. ಡಾ.ಆರ್.ಯಶಸ್ವಿನಿ, ಡಾ.ಆರ್.ನಿಖಿಲಾ, ಡಾ.ಕೆ.ದಿಲೀಪ್ ಕುಮಾರ್, ಡಾ.ಟಿ.ಸಿ.ಸುಪ್ರಿಯಾ, ಡಾ.ಎಸ್.ಚೈತ್ರಾ, ಡಾ.ನವನ್ಯಾ ಚಿನ್ನದ ಪದಕ ಗಳಿಸಿದ್ದಾರೆ ಎಂದು ವಿವರಿಸಿದರು.

ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುವರು. ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್ ಪದವಿ ಪ್ರದಾನ ಮಾಡುವರು. ದೇವರಾಜ ಅರಸು ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಆರ್.ಎಲ್.ಜಾಲಪ್ಪ ಅತಿಥಿಯಾಗಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಸಂಸ್ಥೆಯ ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರ ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಗೋಷ್ಠಿಯಲ್ಲಿ ಹಾಜರಿದ್ದರು

# ವೈದ್ಯಕೀಯ, ದಂತವೈದ್ಯ ಪ್ರವೇಶ ಶೇ 50ರಷ್ಟು ಸೀಟು ಕನ್ನಡಿಗರಿಗೆ ನೀಡಲು ಮಸೂದೆ ಮಂಡನೆ



ಬೆಂಗಳೂರು: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶದಲ್ಲಿ ಶೇ 50ರಷ್ಟು ಸೀಟುಗಳನ್ನು ಕನ್ನಡಿಗರಿಗೆ ಮೀಸಲಿಡುವ ಸಂಬಂಧ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ವೈದ್ಯಕೀಯ ಕೋರ್ಸ್‌ಗಳಿಗೆ ಇದು ವರೆಗೆ ನಡೆಯುತ್ತಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ ಬದಲಾಗಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ಎನ್‌ಇಇಟಿ) ನಡೆಸಲು ಅವಕಾಶ ನೀಡಲಾಗಿದೆ.

ಎನ್‌ಇಇಟಿ ಮೆರಿಟ್ ಆಧಾರದ ಮೇಲೆ ರಾಜ್ಯಕ್ಕೆ ಲಭ್ಯವಾಗುವ ಒಟ್ಟು ಸೀಟುಗಳಲ್ಲಿ ಶೇ 50ರಷ್ಟನ್ನು ಕನ್ನಡಿಗರಿಗೆ ಮತ್ತು ಉಳಿದ ಶೇ 50ರಷ್ಟು ಸೀಟುಗಳನ್ನು ಅಖಿಲ ಭಾರತ ಕೋಟಾಕ್ಕೆ ನೀಡಲು ಈ ಮಸೂದೆ ಅವಕಾಶ ಕಲ್ಪಿಸಲಿದೆ.

ಇದಲ್ಲದೆ, ಸರ್ಕಾರಿ, ಖಾಸಗಿ, ಡೀಮ್ಡ್ ಮತ್ತು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸೀಟುಗಳ ಭರ್ತಿಗೆ ಎನ್‌ಇಇಟಿಯ ಮೆರಿಟ್ ಆಧಾರದ ಮೇಲೆ ಕೇಂದ್ರೀಕೃತ ಕೌನ್ಸೆಲಿಂಗ್ ನಡೆಸಲಾಗುವುದು ಎಂದು ತಿದ್ದುಪಡಿ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಜಾವಾಣಿ



# ವೈದ್ಯಕೀಯ ಸೀಟು: ನ್ಯಾಯ ಒದಗಿಸಿ

## ರಾಜ್ಯ ಸರ್ಕಾರಕ್ಕೆ ದಕ್ಕುವ ಎಲ್ಲಾ ಸೀಟುಗಳಲ್ಲಿ ಕರ್ನಾಟಕ ಮೂಲದ ವಿದ್ಯಾರ್ಥಿಗಳಿಗಷ್ಟೇ ಅವಕಾಶ ನೀಡುವುದಕ್ಕಾಗಿ ಕೂಡಲೇ ಸುಗ್ರೀವಾಜ್ಞೆ ಹೊರಡಿಸಲಿ

• ಡಾ. ಶ್ರೀನಿವಾಸ ಕಕ್ಕಿಲ್ಲಾಯ


ಜನರಿಂದ ಚುನಾಯಿತವಾದ ಸರ್ಕಾರವು ಕಾನೂನು-ತೀರ್ಪುಗಳನ್ನೆಲ್ಲ ಕಡೆಗಣಿಸಿ ಜನಹಿತಕ್ಕೆ ವಿರುದ್ಧವಾಗಿ ವರ್ತಿಸುವ ಚಾಳಿಯನ್ನು ಮೈಗೂಡಿಸಿಕೊಂಡಿದೆ ಎನ್ನುವುದಕ್ಕೆ ಮತ್ತೊಂದು ನಿದರ್ಶನ ಇಲ್ಲಿದೆ.

ವೈದ್ಯಕೀಯ ಸ್ನಾತಕೋತ್ತರ ವ್ಯಾಸಂಗದ ಪ್ರವೇಶಾತಿಗೆ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆಯೊಂದನ್ನೇ (ನೀಟ್) ಕಡ್ಡಾಯಗೊಳಿಸಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಹಾಗೂ ಸಂಸತ್ತಿನಲ್ಲಿ ಈ ಸಂಬಂಧ ನೀತಿ ನಿರೂಪಣೆಯಾಗಿದೆ, ಪರೀಕ್ಷೆಯೂ ಮುಗಿದು ಫಲಿತಾಂಶ ಹೊರಬಿದ್ದಿದೆ. ಎಲ್ಲಾ ಬಗೆಯ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ, ಖಾಸಗಿ, ಅನಿವಾಸಿ ಹೀಗೆ ಯಾವುದೇ ಕೋಟಾ ಸೀಟುಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ನಿಗಾವಣೆಯಲ್ಲಿರುವ ಸಂಸ್ಥೆಗಳ ಮೂಲಕವೇ ಹಂಚಿಕೆ ಮಾಡಬೇಕು. ಖಾಸಗಿ ಸಂಸ್ಥೆಗಳು ಮಾಡುವಂತಿಲ್ಲ ಎಂದು ಕಳೆದ ಸೆಪ್ಟೆಂಬರ್ 22 ಹಾಗೂ 28ರಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ತೀರ್ಪಿತ್ತಿದೆ. ಆ ಬಳಿಕ ಕೇಂದ್ರ ಸರ್ಕಾರ, ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಪತ್ರಗಳನ್ನೂ ಬರೆದಿವೆ. ಎಂಸಿಐ ತನ್ನ ನಿಯಮಗಳನ್ನು ಬದಲಿಸಿ ಅದನ್ನು ರಾಜ್ಯಪತ್ರದಲ್ಲೂ ಪ್ರಕಟಿಸಿದೆ.

ಇಷ್ಟಾದರೂ ನಮ್ಮ ರಾಜ್ಯದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರಿ ಸೀಟುಗಳನ್ನಷ್ಟೇ ಹಂಚುವುದಾಗಿ ಫೆಬ್ರುವರಿ ಕೊನೆಯ ವಾರದಲ್ಲಿ ತರಾತುರಿಯಿಂದ ಅಧಿಸೂಚನೆ ಹೊರಡಿಸಿತು; ಖಾಸಗಿ ಹಾಗೂ ಡೀಮ್ಡ್ ಸಂಸ್ಥೆಗಳು ತಮ್ಮದೇ ಹಂಚಿಕೆ ಮಾಡಲು ಮುಂದಾದವು. ಆದರೆ, ಎರಡೇ ವಾರಗಳಲ್ಲಿ ಈ ಪ್ರತ್ಯೇಕ ಹಂಚಿಕೆಯ ಪ್ರಕ್ರಿಯೆಯನ್ನು ರದ್ದು ಮಾಡಬೇಕಾಯಿತು. ಇದೀಗ, ಖಾಸಗಿ ಹಾಗೂ ಡೀಮ್ಡ್ ಸಂಸ್ಥೆಗಳ ಕೆಲವು ಸೀಟುಗಳನ್ನು ಪ್ರಾಧಿಕಾರದಿಂದಲೇ ಹಂಚುವುದಾಗಿ ಮತ್ತೊಂದು ಅಧಿಸೂಚನೆ ಹೊರಡಿಸಿದ್ದರೂ, ಅನಿವಾಸಿ ಹಾಗೂ ಆಡಳಿತ ಮಂಡಳಿ ಕೋಟಾದ ಹೆಸರಲ್ಲಿ ಕೆಲವು ಸೀಟುಗಳನ್ನು ಈಗಲೂ ಖಾಸಗಿಯವರ ಸುಪರ್ದಿಗೆ ನೀಡಲಾಗಿದೆ! ಕಾನೂನಿನಿಂದ ನುಣುಚಿಕೊಳ್ಳುವ ಪ್ರಯತ್ನವನ್ನು ಸರ್ಕಾರ ಹಾಗೂ ಖಾಸಗಿ ಆಡಳಿತ ಮಂಡಳಿಗಳು ಇನ್ನೂ ಮುಂದುವರಿಸಿವೆ!

ಎಲ್ಲಾ ಖಾಸಗಿ ಸಂಸ್ಥೆಗಳಲ್ಲಿ ಶೇಕಡ 50ರಷ್ಟು ಸೀಟುಗಳನ್ನು ತುಂಬುವ ಹಕ್ಕು ಸರ್ಕಾರಕ್ಕಿದೆ ಎನ್ನುವುದನ್ನು ಎಂಸಿಐಯ ಸ್ನಾತಕೋತ್ತರ ವ್ಯಾಸಂಗದ ನಿಯಮಗಳ ಕಂಡಿಕೆ 9 (VI) ರಲ್ಲಿ, ಕೇಂದ್ರ ಆರೋಗ್ಯ ಇಲಾಖೆಯ ಈ ವರ್ಷದ ಫೆಬ್ರುವರಿ 21ರ ಸುತ್ತೋಲೆಯಲ್ಲಿ ಹಾಗೂ ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿ ನಿಯಂತ್ರಣದ ಮೂಲ ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ನಮ್ಮ ರಾಜ್ಯ ಸರ್ಕಾರವು ಕ್ರಮೇಣ ತನ್ನ ಪಾಲನ್ನು ಶೇ 33ಕ್ಕೆ ಇಳಿಸಿದೆ! ಕಳೆದ ಎರಡು ವರ್ಷಗಳ ಸೀಟು ಹಂಚಿಕೆಯನ್ನು ಗಮನಿಸಿದರೆ, ಸರ್ಕಾರಕ್ಕೆ ದಕ್ಕಿರುವ ಪಾಲು ಶೇ 25ಕ್ಕೂ ಕಡಿಮೆ! ಹೀಗೆ, ಖಾಸಗಿ ಕಾಲೇಜುಗಳ ಶೇ 50ರಷ್ಟು ಸೀಟುಗಳನ್ನು ಸರ್ಕಾರವು ಪಡೆದು ಪ್ರತಿಭಾವಂತರಿಗೆ ನೀಡಬೇಕೆನ್ನುವ ನಿಯಮವೂ ಮೂಲೆ ಸೇರಿದೆ.

ಇನ್ನು, ರಾಜ್ಯದ ವಿದ್ಯಾರ್ಥಿಗಳಿಗೆ ಸೇರಬೇಕಾದ ಸರ್ಕಾರಿ ಕೋಟಾದ ಸೀಟುಗಳಲ್ಲಿ ಹೊರರಾಜ್ಯದವರಿಗೂ ಪಾಲು ನೀಡಲಾಗುತ್ತಿದೆ! ಸರ್ಕಾರಿ ಕಾಲೇಜುಗಳಲ್ಲಿರುವ ಶೇ 50ರಷ್ಟು ಸ್ನಾತಕೋತ್ತರ ಸೀಟುಗಳನ್ನು ರಾಷ್ಟ್ರೀಯ ಮಟ್ಟದ ಸೀಟು ಹಂಚಿಕೆಗೆ ಬಿಟ್ಟುಕೊಡಲಾಗುತ್ತಿದೆ. ಆದಾಗ ರಾಜ್ಯಕ್ಕೆ ಉಳಿಯುವ ಸೀಮಿತ ಸೀಟುಗಳನ್ನು ಇಲ್ಲಿ ಎಂಬಿಬಿಎಸ್ ಓದಿರುವ ಹೊರ ರಾಜ್ಯದ ವಿದ್ಯಾರ್ಥಿಗಳಿಗೂ ನೀಡಲಾಗುತ್ತದೆ! ಅಂದರೆ, ನಮ್ಮ ರಾಜ್ಯದ ಖಾಸಗಿ ಕಾಲೇಜೊಂದರಲ್ಲಿ ಲಕ್ಷಗಟ್ಟಲೆ ಕೊಟ್ಟು ಎಂಬಿಬಿಎಸ್ ಪಡೆದ ಹೊರರಾಜ್ಯದ ವಿದ್ಯಾರ್ಥಿಗೆ ರಾಜ್ಯ ಸರ್ಕಾರವು ತನ್ನ ಕಾಲೇಜಿನಲ್ಲಿ ಸ್ನಾತಕೋತ್ತರ ಸೀಟನ್ನು ದಯಪಾಲಿಸುತ್ತದೆ! ಹೀಗೆ, ಕರ್ನಾಟಕದ ವಿದ್ಯಾರ್ಥಿಗಳು ತಮ್ಮ ಸ್ವಪ್ರತಿಭೆಯಿಂದ ರಾಜ್ಯದಲ್ಲಿ ದೊರೆಯುವ ಎಂಬಿಬಿಎಸ್ ಸೀಟುಗಳಲ್ಲಿ ಮೂರರಲ್ಲೆರಡು ಪಾಲನ್ನು ಪಡೆಯುತ್ತಾರೆ. ಆದರೆ, ಸ್ನಾತಕೋತ್ತರ ವ್ಯಾಸಂಗಕ್ಕೆ ಕೇವಲ ಐದರಲ್ಲೊಂದು ಪಾಲನ್ನಷ್ಟೇ ಪಡೆಯುತ್ತಾರೆ. ಆದರೆ, ರಾಜ್ಯದ ಖಾಸಗಿ ಕಾಲೇಜುಗಳಲ್ಲಿ ಹಣ ಕೊಟ್ಟು ಮೂರರಲ್ಲೊಂದು ಸೀಟನ್ನು ಪಡೆಯುವ ಹೊರರಾಜ್ಯದ ವಿದ್ಯಾರ್ಥಿಗಳು ಸ್ನಾತಕೋತ್ತರ ವ್ಯಾಸಂಗಕ್ಕೆ ಐದರಲ್ಲಿ ನಾಲ್ಕು ಸೀಟು ಪಡೆಯಲು ಅರ್ಹರಾಗುತ್ತಾರೆ!



ಹೀಗೆ ಕರ್ನಾಟಕದ ಸರ್ಕಾರಿ ಸೀಟುಗಳಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡಿದವರು ಮೂರು ವರ್ಷ ಸೇವೆ ಸಲ್ಲಿಸದಿದ್ದರೆ ₹ 50 ಲಕ್ಷ ದಂಡ ಕಟ್ಟುವ ಮುಚ್ಚಳಿಕೆ ನೀಡಬೇಕೆಂಬ ನಿಯಮವೂ ರಾಜ್ಯದಲ್ಲಿದೆ. ಆದರೆ ಇಲ್ಲಿ ಎಂಡಿ- ಎಂಎಸ್ ಮಾಡಿದ ಹೊರರಾಜ್ಯದ ಎಷ್ಟು ಮಂದಿ ಇಲ್ಲಿ ಉಳಿದು ಸೇವೆ ಮಾಡಿದ್ದಾರೆ? ಈ ನಿಯಮಗಳು ಕನ್ನಡಿಗರಿಗೆ ಮಾತ್ರ ಅನ್ವಯವಾಗುತ್ತವೆಯೇ? ಹೊರರಾಜ್ಯದವರಿಗೆ ಅದರಲ್ಲೂ ರಿಯಾಯಿತಿ ಇದೆಯೇ?

ಒಂದೆಡೆ ಪ್ರತೀ ಎಂಬಿಬಿಎಸ್ ವಿದ್ಯಾರ್ಥಿಗೆ ₹ 25 ಲಕ್ಷ ಖರ್ಚಾಗುವುದರಿಂದ ಅವರೆಲ್ಲ ಹಳ್ಳಿಗೆ ಹೋಗಬೇಕೆನ್ನುವ ಸರ್ಕಾರವು ಇನ್ನೊಂದೆಡೆ ತನ್ನ ಬಹುತೇಕ ಸ್ನಾತಕೋತ್ತರ ಸೀಟುಗಳನ್ನು ಹೊರರಾಜ್ಯದವರಿಗೆ ಷರತ್ತುರಹಿತವಾಗಿ ನೀಡುತ್ತಿದೆಯೇ? ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗೆ ಸಂಬಂಧಿಸಿದ ನೀಟ್ ಪರೀಕ್ಷೆಗೆ ಈ ವರ್ಷ ಕೇಂದ್ರ ಹೊಸ ನಿಯಮ ಜಾರಿಗೆ ತಂದಿದೆ. ಹಾಗಾಗಿ ರಾಜ್ಯದ ನಿಯಮಗಳೆಲ್ಲವೂ ತಂತಾನೇ ಅನೂರ್ಜಿತಗೊಂಡಿವೆ. ಅವನ್ನು ಪರಿಷ್ಕರಿಸಬೇಕಾಗಿರುವ ಈ ಸುಸಂದರ್ಭದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗಾಗುತ್ತಿರುವ ಅನ್ಯಾಯವನ್ನೂ ಸರಿಪಡಿಸಬೇಕಾಗಿದೆ.

ಎಲ್ಲಾ ವೈದ್ಯಕೀಯ ಸೀಟುಗಳನ್ನು ಸರ್ಕಾರದ ನಿಗಾವಣೆಯಲ್ಲಿ ಏಕಗವಾಕ್ಷಿ ವ್ಯವಸ್ಥೆ ಮೂಲಕ ಹಂಚುವುದು, ಖಾಸಗಿ ಸಂಸ್ಥೆಗಳ ಶೇ 50ರಷ್ಟು ಸೀಟುಗಳನ್ನು ಸರ್ಕಾರವು ಪಡೆಯುವುದು, ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ರಾಜ್ಯ ಸರ್ಕಾರಕ್ಕೆ ದಕ್ಕುವ ಎಲ್ಲಾ ಸೀಟುಗಳಲ್ಲಿ ಕರ್ನಾಟಕ ಮೂಲದ ವಿದ್ಯಾರ್ಥಿಗಳಿಗಷ್ಟೇ ಅವಕಾಶ ನೀಡುವುದಕ್ಕೆ ಈ ಕೂಡಲೇ ಸುಗ್ರೀವಾಜ್ಞೆ ಹೊರಡಿಸಿ, ರಾಜ್ಯದ ವಿದ್ಯಾರ್ಥಿಗಳಿಗೂ, ವೈದ್ಯಕೀಯ ಶಿಕ್ಷಣಕ್ಕೂ ಈ ವರ್ಷದಿಂದಲೇ ನ್ಯಾಯ ಒದಗಿಸಬೇಕಾಗಿದೆ.

ಕನ್ನಡಪ್ರಭ



# ದೇವರಾಜು ಅರಸು ವೈದ್ಯಕೀಯ ಸಂಸ್ಥೆಯ 7ನೇ ಘಟಿಕೋತ್ಸವ

## 271 ಮಂದಿಗೆ ಪದವಿ ಪ್ರದಾನ | ಡಾ ಸಿ ಎನ್ ಮಂಜುನಾಥ್‌ರಿಂದ ಘಟಿಕೋತ್ಸವ ಭಾಷಣ | 182 ಮಂದಿ ಎಂಬಿಬಿಎಸ್ ಪದವಿ

• **ಕನ್ನಡಪ್ರಭ ವಾರ್ತೆ** ಕೋಲಾರ

ಶ್ರೀದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಮಾ.24ರಂದು ವೈದ್ಯಕೀಯ ಕಾಲೇಜಿನ ರಹಜ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾಲಯದ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 271 ಮಂದಿಗೆ ಪದವಿ ಪ್ರದಾನ ಮಾಡಲಾಗುವುದು. ಸ್ನಾತಕೋತ್ತರ ಮತ್ತು ಡಿಪ್ಲೋಮಾ 5 ಮಂದಿ ವಿದ್ಯಾರ್ಥಿಗಳು ಹಾಗೂ ಎಂಬಿಬಿಎಸ್ ವಿದ್ಯಾರ್ಥಿನಿಯೊಬ್ಬರಿಗೆ ಚಿನ್ನದ ಪದಕ ಪಡೆದಿದ್ದಾರೆ. ಎರಡು ಪಿಎಚ್‌ಡಿ, ನಾಲ್ಕು ಫೆಲೋಶೀಪ್, ಒಂದು ಎಂಫಿಲ್, ನಾಲ್ಕು ಎಂಎಸ್ಸಿ (ಮಾಲಿಕ್ಯುಲರ್ ಬಯಾಲಜಿ ಅಂಡ್ ಹ್ಯೂಮನ್ ಜಿನಿಟಿಕ್ಸ್), ನಾಲ್ಕು ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್, ಎಂಬಿಬಿಎಸ್ ಪದವಿ 182, ಸ್ನಾತಕೋತ್ತರ ಪದವಿ 47, ಸ್ನಾತಕೋತ್ತರ ಡಿಪ್ಲೋಮಾ 18, ಸ್ನಾತಕೋತ್ತರ ಡಿಪ್ಲೋಮಾ ಯೋಗಾ ಪ್ರಾಕ್ಟೀಸ್ 1 ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ 8 ಮಂದಿಗೆ ಸೇರಿ ಒಟ್ಟು 217 ಮಂದಿಗೆ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋವ್ಯಾಸ್ಕುಲರ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್‌ನ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಅತಿಥಿಗಳಾಗಿ ಸಂಸ್ಥೆಯ ಕುಲಾಧಿಪತಿ ಡಾ.ಎಸ್ ಕುಮಾರ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸುತ್ತಾರೆ. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಜಾಲಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ವಿಜಯವಾಣಿ



# ದೇವರಾಜ ಅರಸು ಶಿಕ್ಷಣ ಸಂಸ್ಥೆ ಘಟಿಕೋತ್ಸವ ಇಂದು

■ **ವಿಜಯವಾಣಿ ಸುದ್ದಿಜಾಲ** ಕೋಲಾರ

ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ವಾರ್ಷಿಕ ಘಟಿಕೋತ್ಸವ ಮಾ.24ರಂದು ನಡೆಯಲಿದ್ದು, 6 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 271 ಮಂದಿಗೆ ಪದವಿ ಪ್ರದಾನ ಮಾಡಲಾಗುವುದು ಎಂದು ವಿದ್ಯಾಲಯದ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು. ಸಂಸ್ಥೆಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 11ಕ್ಕೆ ವೈದ್ಯಕೀಯ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಘಟಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದರು. ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋವ್ಯಾಸ್ಕುಲರ್ ಸೈನ್ಸಸ್ ಆ್ಯಂಡ್ ರಿಸರ್ಚ್ ಸೆಂಟರ್ ನಿರ್ದೇಶಕ, ಪದ್ಮಶ್ರೀ ಪುರಸ್ಕೃತ ಡಾ.ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುವರು. ಸಂಸ್ಥೆಯ ಕುಲಾಧಿಪತಿ ಡಾ.ಎಸ್.ಕುಮಾರ್ ಅಧ್ಯಕ್ಷತೆ ವಹಿಸುವರು. ಶ್ರೀ ದೇವರಾಜು ಅರಸು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ ಭಾಗವಹಿಸುವರು ಎಂದರು. ಸ್ನಾತಕೋತ್ತರ ಮತ್ತು ಡಿಪ್ಲೊಮಾ 5 ಮಂದಿ ವಿದ್ಯಾರ್ಥಿಗಳಿಗೆ ಹಾಗೂ ಒಬ್ಬರಿಗೆ ಎಂಬಿಬಿಎಸ್ ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ, ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದಿರುವ ಪಿಎಚ್‌ಡಿ 2, ಫೆಲೋಶಿಫ್ 4, ಎಂಫಿಲ್ 1, ಎಂಎಸ್ಸಿ (ಮಾಲಿಕ್ಯುಲರ್ ಬಯಾಲಜಿ ಅಂಡ್ ಹ್ಯೂಮನ್ ಜಿನಿಟಿಕ್ಸ್) 4, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ 4, ಎಂಬಿಬಿಎಸ್ ಪದವಿ 182, ಸ್ನಾತಕೋತ್ತರ ಪದವಿ 47, ಸ್ನಾತಕೋತ್ತರ ಡಿಪ್ಲೊಮಾ 18, ಸ್ನಾತ್ತಕೋತ್ತರ ಡಿಪ್ಲೊಮಾ ಯೋಗಾ ಪ್ರಾಕ್ಟೀಸ್ 1, ಅಲೈಡ್ ಹೆಲ್ತ್ ಸೈನ್ಸಸ್ 8 ಮಂದಿ ಸೇರಿ ಒಟ್ಟು 217 ಮಂದಿಗೆ ಪ್ರದಾನ ಮಾಡಲಾಗುವುದು ಎಂದರು. ಸಂಸ್ಥೆಯ ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಹಾಜರಿದ್ದರು.

## ಚಿನ್ನದ ವಿದ್ಯಾರ್ಥಿಗಳು

ಸ್ನಾತಕೋತ್ತರ ವಿದ್ಯಾರ್ಥಿಗಳಾದ ರೋಗಲಕ್ಷಣ ಶಾಸ್ತ್ರ ವಿಭಾಗದಿಂದ ಡಾ. ಆರ್.ಯಶಸ್ವಿನಿ, ಅರವಳಿಕೆ ವಿಭಾಗದಲ್ಲಿ ಡಾ.ಆರ್.ನಿಕಿಲಾ, ನೇತ್ರ ವಿಭಾಗದಲ್ಲಿ ಡಾ.ಕೆ.ದಿಲೀಪ್ ಕುಮಾರ್, ಡಿಪ್ಲೊಮಾ ಅರವಳಿಕೆ ವಿಭಾಗದಲ್ಲಿ ಡಾ.ಟಿ.ಸಿ.ಸುಪ್ರಿಯಾ, ಇಎನ್‌ಟಿ ವಿಭಾಗದ ಡಾ.ಎಸ್. ಚೈತ್ರಾ ಹಾಗೂ ಎಂಬಿಬಿಎಸ್ ಡಾ.ನವನ್ಯಾ ಚಿನ್ನದ ಪದಕಕ್ಕೆ ಪಾತ್ರರಾಗಿದ್ದಾರೆ.

ವಿಜಯ ಕರ್ನಾಟಕ



# ಅರಸು ಸಂಸ್ಥೆ 7ನೇ ಘಟಿಕೋತ್ಸವ ನಾಳೆ

**ವಿಕ ಸುದ್ದಿಲೋಕ** ಕೋಲಾರ

ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ 7ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಮಾ.24ರಂದು ಬೆಳಗ್ಗೆ 11ಕ್ಕೆ ವೈದ್ಯಕೀಯ ಕಾಲೇಜಿನ ರಹಜ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾಲಯದ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ಸಂಸ್ಥೆಯ ಸಭಾಂಗಣದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸ್ನಾತಕೋತ್ತರ ಮತ್ತು ಡಿಪ್ಲೋಮಾ 5 ಮಂದಿ ವಿದ್ಯಾರ್ಥಿಗಳಿಗೆ ಹಾಗೂ ಒಬ್ಬರಿಗೆ ಎಂಬಿಬಿಎಸ್ ವಿದ್ಯಾರ್ಥಿನಿಗೆ ಚಿನ್ನದ ಪದಕ, ನಾನಾ ಕೋರ್ಸ್‌ಗಳಲ್ಲಿ ಪದವಿ ಪಡೆದುಕೊಂಡಿರುವ ಪಿಎಚ್‌ಡಿ 2, ಫೆಲೋಶಿಪ್ 4, ಎಂಫಿಲ್ 1, ಎಂಎಸ್ಸಿ (ಮಾಲಿಕ್ಯುಲರ್ ಬಯಾಲಜಿ ಅಂಡ್ ಹ್ಯೂಮನ್ ಜೆನಿಟಿಕ್ಸ್) 4, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ 4, ಎಂಬಿಬಿಎಸ್ ಪದವಿ 182, ಸ್ನಾತಕೋತ್ತರ ಪದವಿ 47, ಸ್ನಾತಕೋತ್ತರ ಡಿಪ್ಲೋಮಾ 18, ಸ್ನಾತ್ತಕೋತ್ತರ ಡಿಪ್ಲೋಮಾ ಯೋಗಾ ಪ್ರಾಕ್ಟೀಸ್ 1 ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ 8 ಮಂದಿಗೆ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ರೋಗಲಕ್ಷಣ ಶಾಸ್ತ್ರ ವಿಭಾಗದ ಡಾ.ಆರ್ಯಶಸ್ವಿನಿ, ಅರವಳಿಕೆ ವಿಭಾಗ ಡಾ. ಆರ್.ನಿಕಿಲಾ, ನೇತ್ರ ವಿಭಾಗ ಡಾ.ಕೆ.ದಿಲೀಪ್ ಕುಮಾರ್, ಡಿಪ್ಲೋಮಾ ಅರವಳಿಕೆ ವಿಭಾಗದ ಡಿಪ್ಲೋಮಾ ಡಾ.ಟಿ.ಸಿ.ಸುಪ್ರಿಯಾ, ಇಎನ್‌ಟಿ ವಿಭಾಗದ ಡಾ.ಎಸ್.ಚೈತ್ರಾ ಹಾಗೂ ಎಂಬಿಬಿಎಸ್‌ನ ಡಾ.ನವನ್ಯಾ ಚಿನ್ನದ ಪದಕಗಳಿಸಿಕೊಂಡಿದ್ದಾರೆ ಎಂದು ವಿವರಿಸಿದರು.

ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋ ವ್ಯಾಸ್ಕುಲರ್ ಸೈನ್ಸಸ್ ಆ್ಯಂಡ್ ರೀಸರ್ಚ್ ಸೆಂಟರ್‌ನ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುತ್ತಾರೆ. ಅತಿಥಿಗಳಾಗಿ ಸಂಸ್ಥೆಯ ಕುಲಾಧಿಪತಿ ಡಾ.ಎಸ್.ಕುಮಾರ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸುತ್ತಾರೆ. ದೇವರಾಜು ಅರಸು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಿನ್ಸಿಪಾಲ್ ಡಾ. ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಹಾಜರಿದ್ದರು.

## ದೇವರಾಜ ಅರಸು ವೈದ್ಯಕೀಯ ವಿ.ವಿ. ಏಳನೇ ಘಟಿಕೋತ್ಸವ ನಾಳೆ

# ಮಲೇಷಿಯಾ ವಿದ್ಯಾರ್ಥಿನಿ ಸೇರಿ ಐವರಿಗೆ ಸ್ವರ್ಣಪದಕ

ಕೋಲಾರ ಮಾ ೨೨

ಆಂಧ್ರಪ್ರದೇಶ ಮೂಲದ ಮಲೇಷ್ಯಾ ವಿದ್ಯಾರ್ಥಿನಿ ಡಾ॥ ನಾವನ್ಯಾ ಸಮುಥಿರಾವನ್ ಅವರು ೨೦೧೩ರಲ್ಲಿ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ನಡೆಸಿದ ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ ಅತ್ಯುನ್ನತ ಸ್ಥಾನ ಗಳಿಸಿ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆಂದು ವಿಶ್ವವಿದ್ಯಾಲಯದ ಉಪಕುಲಪತಿ ಡಾ॥ ಸಿ.ವಿ. ರಘುವೀರ್ ಅವರು ಪ್ರಕಟಿಸಿದರು.

ಸಂಸ್ಥೆಯ ಏಳನೇ ಘಟಿಕೋತ್ಸವವು ಇದೇ ೨೪ರಂದು ನಡೆಯಲಿದ್ದು, ತದಂಗವಾಗಿ ಪತ್ರಿಕಾ ಗೋಷ್ಠಿಯಲ್ಲಿ ವಿವರಣೆ ನೀಡಿದ ರಘುವೀರ್ ಅವರು, ಬೆಂಗಳೂರು ಜಯದೇವ ಆಸ್ಪತ್ರೆಯ ನಿರ್ದೇಶಕ, ಪದ್ಮಶ್ರೀ ಡಾ॥ ಸಿ.ಎನ್. ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕುಲಪತಿ ಡಾ॥ ಎಸ್. ಕುಮಾರ್ ಅವರು ಪದವಿ ಪ್ರದಾನ ಮಾಡುವರು. ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಆರ್.ಎಲ್. ಜಾಲಪ್ಪನವರು ಉಪಸ್ಥಿತರಿರುವರು ಎಂದು ಹೇಳಿದರು.

ಬಂಗಾರದ ಪದಕ ಗಳಿಸಿರುವ ಪ್ರತಿಭೆಗಳು



ಡಾ॥ ನವನ್ಯಾ



ಡಾ॥ ಯಶಸ್ವಿನಿ



ಡಾ॥ ನಿಖಿಲಾ



ಡಾ॥ದಿಲೀಪ್‌ಕುಮಾರ್



ಡಾ॥ ಸುಪ್ರಿಯ



ಡಾ॥ಚೈತ್ರಾ

ಸಂಸ್ಥೆಯ ಪರೀಕ್ಷಾ ನಿಯಂತ್ರಕ ಡಾ॥ ಡಿ.ವಿ.ಎಲ್.ಎನ್. ಪ್ರಸಾದ್ ಅವರು ಒಟ್ಟು ೨೪೯ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಪದವಿ ಪ್ರದಾನ ಮಾಡಲಾಗುವುದು. ಆ ಪೈಕಿ ಐದು ಮಂದಿ ಸ್ನಾತಕೋತ್ತರ ಡಿಗ್ರಿ ಹಾಗೂ ಡಿಪ್ಲೋಮಾದವರು ಚಿನ್ನದ ಪದಕ ಗಳಿಸಿದ್ದಾರೆ. ಪೂರಕ ಆರೋಗ್ಯ ವಿಜ್ಞಾನದ ಇಪ್ಪತ್ತೆರಡು ಮಂದಿಯೂ ಪದಕ ವಿಜೇತರಾಗಿದ್ದಾರೆಂದು ತಿಳಿಸಿದರು.

ರೋಗಲಕ್ಷಣ ಶಾಸ್ತ್ರ ವಿಭಾಗದ ಡಾ॥ಯಶಸ್ವಿನಿ, ಅರವಳಿಕೆ ವಿಭಾಗದ ಡಾ॥ ನಿಕಿಲ, ನೇತ್ರ ವಿಭಾಗದ ಡಾ॥ಕೆ. ದಿಲೀಪ್ ಕುಮಾರ್, ಅರವಳಿಕೆ ಡಿಪ್ಲೋಮಾ ವಿಭಾಗದ ಡಾ॥ ಸುಪ್ರಿಯ ಹಾಗೂ ಇಎನ್‌ಟಿ ವಿಭಾಗದ ಡಾ॥ ಚೈತ್ರ ಇವರು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು.

ಎಂಬಿಬಿಎಸ್‌ನ ೧೩೫ ಮಂದಿ, ಎಂಡಿಎಂಎಸ್‌ನ ೧೯ ವಿದ್ಯಾರ್ಥಿಗಳು ಖುದ್ದು ಹಾಜರಿದ್ದು, ಪದವಿ ಸ್ವೀಕರಿಸುವರು ಎಂದು ಪ್ರಸಾದ್ ತಿಳಿಸಿದರು.

ಎಂಬಿಬಿಎಸ್‌ನಲ್ಲಿ ಚಿನ್ನದ ಪದಕ ಗಳಿಸಿರುವ ನಾವನ್ಯ ಅವರು ಮಲೇಷ್ಯಾ ಸರ್ಕಾರದ ಫೆಲೋಶಿಪ್‌ನಲ್ಲಿ ಇಲ್ಲಿ ವ್ಯಾಸಂಗ ಮಾಡಿದ್ದಾಗಿಯೂ, ತಮ್ಮ ಪೋಷಕರು ಆಂಧ್ರದ ವಿಜಯವಾಡ ಮೂಲದವರಾಗಿದ್ದು, ಬಹಳ ಹಿಂದೆ ಮಲೇಷ್ಯಾಕ್ಕೆ ಹೋಗಿರುವುದಾಗಿಯೂ, ಇಂಟರ್ನ್‌ಷಿಪ್ ಮುಗಿದ ನಂತರ ಮುಂದಿನ ವ್ಯಾಸಂಗದ ಬಗ್ಗೆ ಯೋಚಿಸುವುದಾಗಿಯೂ ಹೇಳಿದರು.

ಪಿ.ಎಚ್‌ಡಿ-೦೨, ಫೆಲೋಷಿಪ್-೦೪, ಎಂ.ಫಿಲ್ -೦೧, ಎಂ.ಎಸ್ಸಿ (ಮಾಲಿಕ್ಯುಲರ್ ಬಯಾಲಜಿ & ಹ್ಯೂಮನ್ ಜೆನಿಟಿಕ್ಸ್) - ೦೪, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ -೦೪, ಎಂ.ಬಿ.ಬಿ.ಎಸ್ ಪದವಿ-೧೮೨ ಸ್ನಾತಕೋತ್ತರ ಪದವಿ-೪೭, ಸ್ನಾತಕೋತ್ತರ ಡಿಪ್ಲೋಮಾ-೧೮,ಸ್ನಾತಕೋತ್ತರ ಡಿಪ್ಲೋಮಾ ಯೋಗಪ್ರಾಕ್ಟೀಸ್-೦೧ ಹಾಗೂ ಅಲೈಡ್ ಹೆಲ್ತ್ ಸೈನ್ಸ್ - ೦೮, ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದೆಂದು ಹೇಳಿದರು.

ಪ್ರಾಂಶುಪಾಲ ಡಾ॥ ಹರೇಂದ್ರಕುಮಾರ್, ಕುಲಸಚಿವ ಮೊಹಿದೀನ್ ಕುಟ್ಟಿ ಭಾಗವಹಿಸಿದ್ದರು.

ಕೋಲಾರ ಪ್ರಭ

**Pg.No.01**

ನಾಳೆ ಅರಸು ಉನ್ನತ ಶಿಕ್ಷಣ ಸಂಶೋಧನಾ ಸಂಸ್ಥೆ 7ನೇ ಘಟಿಕೋತ್ಸವ

# 271 ಮಂದಿಗೆ ಪದವಿ ಪ್ರಧಾನ

ಕೋಲಾರ: 'ದೇವರಾಜು ಅರಸು ಉನ್ನತ ಶಿಕ್ಷಣ ಹಾಗೂಸಂಶೋಧನಾ ಸಂಸ್ಥೆಯ 7ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಮಾ.24ರಂದು ಬೆಳಿಗ್ಗೆ 11ಕ್ಕೆ ವೈದ್ಯಕೀಯ ಕಾಲೇಜಿನ ರಹಜ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ವಿದ್ಯಾಲಯದ ಉಪ ಕುಲಪತಿ ಡಾ.ಸಿ.ವಿ.ರಘುವೀರ್ ತಿಳಿಸಿದರು.

ಸಂಸ್ಥೆಯ ಸಭಾಂಗಣದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಸಂದರ್ಭದಲ್ಲಿ 271 ಮಂದಿಗೆ ಪದವಿ ಪ್ರದಾನ ಮಾಡಲಾಗುವುದು ಎಂದರು.

ಸ್ನಾತಕೋತ್ತರ ಮತ್ತು ಡಿಪ್ಲೋಮಾ 5 ಮಂದಿ ವಿದ್ಯಾರ್ಥಿಗಳಿಗೆ ಹಾಗೂ ಒಬ್ಬರಿಗೆ ಎಂಬಿಬಿಎಸ್ ವಿದ್ಯಾರ್ಥಿನಿಗೆ ಚಿನ್ನದ ಫದಕ. ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದುಕೊಂಡಿರುವ ಪಿಎಚ್‌ಡಿ 2, ಫೆಲೋಶೀಫ್ 4, ಎಂಫಿಲ್ 1, ಎಂಎಸ್ಸಿ (ಮಾಲಿಕ್ಯುಲರ್ ಬಯಾಲಜಿ ಅಂಡ್ ಹ್ಯೂಮನ್ ಜೆನಿಟಿಕ್ಸ್) 4, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ 4, ಎಂಬಿಬಿಎಸ್ ಪದವಿ 182, ಸ್ನಾತಕೋತ್ತರ ಪದವಿ 47, ಸ್ನಾತಕೋತ್ತರ ಡಿಪ್ಲೋಮಾ 18, ಸ್ನಾತ್ತಕೋತ್ತರ ಡಿಪ್ಲೋಮಾ ಯೋಗಾ ಪ್ರಾಕ್ಟೀಸ್ 1 ಹಾಗೂ ಅಲೈಡ್ ಹೆಲ್ತ್ ಸೈನ್ಸಸ್ 8 ಮಂದಿಗೆ ಸೇರಿ ಒಟ್ಟು 217 ಮಂದಿಗೆ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ಸ್ನಾತಕೋತ್ತರ ಡಿಗ್ರಿ ಮತ್ತು ಡಿಪ್ಲೋಮೋ ವಿದ್ಯಾರ್ಥಿಗಳ ವಿವರ ಈಕೆಳಕಂಡಂತಿದೆ. ರೋಗಲಕ್ಷಣ ಶಾಸ್ತ್ರ ವಿಭಾಗದ ಡಾ.ಆರ್ಯಶಸ್ವಿನಿ, ಅರವಳಿಕೆ ವಿಭಾಗ ಡಾ.ಆರ್.ನಿಕಿಲಾ, ನೇತ್ರ ವಿಭಾಗ ಡಾ.ಕೆ.ದಿಲೀಪ್ ಕುಮಾರ್, ಡಿಪ್ಲೋಮಾ ಅರವಳಿಕೆ ವಿಭಾಗದ ಡಿಪ್ಲೋಮಾ ಡಾ.ಟಿ.ಸಿ. ಸುಪ್ರಿಯಾ, ಇಎನ್‌ಟಿ ವಿಭಾಗದ ಡಾ.ಎಸ್.ಚೈತ್ರಾ ಹಾಗೂ ಎಂಬಿಬಿಎಸ್‌ನ ಡಾ.ನವನ್ಯಾ ಚಿನ್ನದ ಪದಕ ಗಳಿಸಿಕೊಂಡಿದ್ದಾರೆ.

ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋವ್ಯಾಸ್ಕುಲರ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್‌ನ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಘಟಿಕೋತ್ಸವ ಭಾಷಣ ಮಾಡುತ್ತಾರೆ. ಅತಿಥಿಗಳಾಗಿ ಸಂಸ್ಥೆಯ ಕುಲಾಧಿಪತಿ ಡಾ.ಎಸ್.ಕುಮಾರ್ ಘಟಿಕೋತ್ಸವದ ಅಧ್ಯಕ್ಷತೆವಹಿಸುತ್ತಾರೆ. ದೇವರಾಜು ಅರಸು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ ಕಾರ್ಯಕ್ರಮದಲ್ಲಿ ಪಾಲ್ಗೊಲಿದ್ದಾರೆ ಎಂದು ಹೇಳಿದರು.

ಸಂಸ್ಥೆಯ ರಿಜೀಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಡಿ.ವಿ.ಎಲ್.ಎನ್.ಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

# ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ, ಶುಲ್ಕ ನಿಗದಿ ತಿದ್ದುಪಡಿ ಮಸೂದೆ ಮಂಡನೆ

ಬೆಂಗಳೂರು

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ಕುರಿತ 2006 ಅಧಿ ನಿಯಮ 8ಕ್ಕೆ ತಿದ್ದುಪಡಿ ಮಾಡುವ ಮಸೂದೆಯನ್ನು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ವಿಧಾನಸಭೆಯಲ್ಲಿಂದು ಮಂಡಿಸಿದರು.

ವಿಧೇಯಕದ ಉದ್ದೇಶ ವಿವರಿಸಿದ ಅವರು, 2006ರಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಜತೆ ಮಾಡಿಕೊಂಡ ಒಪ್ಪಂದದ ನಂತರ ಕೇಂದ್ರ ಸರ್ಕಾರ ತಂದಿರುವ ಏಕರೂಪದ ಸಾಮಾನ್ಯ ಪ್ರವೇಶ ಕಲ್ಪಿಸುವ ಉದ್ದೇಶದಿಂದ ತಿದ್ದುಪಡಿ ತರಲಾಗುತ್ತಿದೆ.

ಇದು ಖಾಸಗಿ ಶಿಕ್ಷಣ ಸಂಸ್ಥೆಗಳು, ಡೀಮ್ಡ್ ವಿ.ವಿಗಳಲ್ಲಿಯೂ ಸಹ ಕೇಂದ್ರೀಕೃತ ಕೌನ್ಸಿಲಿಂಗ್‌ಗಾಗಿ ನಿಯಮಗಳನ್ನು ಪಾಲಿಸುವುದು ಅತ್ಯಗತ್ಯವಾಗಿರುವುದರಿಂದ ಮಸೂದೆಯನ್ನು ತರಲಾಗುತ್ತಿದೆ ಎಂದರು.

ಕರ್ನಾಟಕ ವೈದ್ಯಕೀಯ ನೊಂದಣಿ ತಿದ್ದುಪಡಿ ವಿಧೇಯಕ 2017ರ ವಿಧೇಯಕವನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ: ಶರಣ ಪ್ರಕಾಶ್ ಪಾಟೀಲ್ ಮಂಡಿಸಿ, ಉದ್ದೇಶವನ್ನು ವಿವರಿಸಿದರು.

ಇದರ ಅನ್ವಯ ವೈದ್ಯಕೀಯ ಶಿಕ್ಷಣದಲ್ಲಿ ಜ್ಞಾನ ಮತ್ತು ಕೌಶಲ್ಯ ಅಭಿವೃದ್ಧಿ, ಕುರಿತ ನಿರಂತರ ಹೊಸತನವನ್ನು ಖಚಿತ ಪಡಿಸಿಕೊಳ್ಳುವುದು ಹಾಗೂ ನಾಲ್ಕು ಕಂದಾಯ ವಿಭಾಗಗಳಲ್ಲಿ ವೈದ್ಯಕೀಯ ಪರಿಷತ್ತಿನ ಪ್ರಾತಿನಿಧ್ಯಕ್ಕೆ ಅವಕಾಶ ಕಲ್ಪಿಸುವ ಮತ್ತು ವೈದ್ಯಕೀಯ ವೃತ್ತಿ ನಿರತರ ನೋಂದಣಿ ಕಡ್ಡಾಯಗೊಳಿಸುವ ಅಂಶಗಳನ್ನು ಇದು ಒಳಗೊಂಡಿದೆ.